ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಇರುವುದಕ್ಕೆ ಒಂದು ಅನುಮತಿ ಕೊಡಲಿ ಹೆಬ್ಬಾಲೆಯಲ್ಲಿ ಈಗಾಗಲೇ ಒಂದು ಹೊರಠಾಣೆಯನ್ನು ತೆರೆದಿದ್ದಾರೆ. ಅಲ್ಲಿಗೆ ಮಂಜೂರಾತಿ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಪೋಲೀಸ್ ಔಟ್‌ಸ್ಟೇಷನನ್ನು ತೆರೆಯುವುದರ ಬಗ್ಗೆ ಅಲ್ಲಿ ಲಾ ಅಂಡ್ ಆರ್ಡರ್ ಸಿಚುಯೇಷನ್ ಮೇಲೆ ಡಿಪೆಂಡ್ ಆಗುತ್ತದೆ. ಸರ್ಕಾರದ ಅನುಮತಿ ಬೇಕಾಗಿಲ್ಲ. ಅಲ್ಲಿರುವ ಎಸ್.ಪಿಯವರೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು. I will look into the matter.

ನಬಾರ್ಡ್ ಯೋಜನೆಯಡಿಯಲ್ಲಿ ಮಸ್ಕಿ ನಾಲಾ ಯೋಜನೆ

144 (1167) ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ (ಲಿಂಗಸಗೂರು) : ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸಗೂರು ತಾಲೂಕಿನ ಮಸ್ಕಿ ನಾಲಾ ಯೋಜನೆಯನ್ನು ನಬಾರ್ಡ್ ಯೋಜಯಲ್ಲಿ ಪುನಃ ಮುಂದುವರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ ;

ಇ) ಈ ಯೋಜನೆಗೆ ಒದಗಿಸಲಾದ ಹಣ ಎಷ್ಟು?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) ಹೌದು

ಆ) ಇದು 1999-2000ದಲ್ಲಿ ಪೂರ್ಣಗೊಳ್ಳುವ ಹಂತದಲ್ಲಿದೆ.

ಇ) 98-99ನೇ ಸಾಲಿಗೆ ರೂ. 500 ಲಕ್ಷಗಳನ್ನು ಒದಗಿಸಲಾಗಿದೆ.

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ತಾಲ್ಲೂಕಿನ ಮಸ್ಕಿನಾ ಯೋಜನೆ ನಬಾರ್ಡ್ ಯೋಜನೆಯಲ್ಲಿ ಪುನಃ ಈ ವರ್ಷ 1999-2000ನೇ ಇಸವಿಯಲ್ಲಿ ಮುಂದುವರಿಸುವರೇ ಎಂದು ಕೇಳಿದಾಗ ಹೌದು ಎಂದಿದ್ದಾರೆ. ಹಾಗಿದ್ದರೆ ಅದು ಯಾವ ಹಂತದಲ್ಲಿದೆ ಎಂದರೆ 1999-2000ನೇ ಇಸವಿಯಲ್ಲಿ ಪೂರ್ಣಗೊಳ್ಳುವ ಹಂತದಲ್ಲಿದೆ ಎನ್ನುತ್ತಾರೆ. ಆದರೆ ಅದಕ್ಕೆ ನಬಾರ್ಡ್ ಯೋಜನೆಯಲ್ಲಿ ದುಡ್ಡನ್ನೇ ಒದಗಿಸಿಲ್ಲ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಅವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಇದು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಮೂರು ಸಾವಿರ ಎಕರೆಗೆ ನೀರು ಬರುವುದು. 1979ರಲ್ಲಿ ಇದಕ್ಕೆ ಆಡಳಿತ ಮಂಜೂರಾತಿ ಸಿಕ್ಕಿದೆ. 1996 ಈ ಸರ್ಕಾರ ಬರುವವರೆಗೆ ಒಂದು ರೂಪಾಯಿ ಕೆಲಸ ಮಾಡಿರಲಿಲ್ಲ ಅದು ನಿಮಗೆ ಗೊತ್ತಿದೆ. 1996 ಆದ ಮೇಲೆ ನಾವು ಕಳೆದ 3-4 ವರ್ಷಗಳಲ್ಲಿ 27 ಕೋಟಿ ಇದಕ್ಕೆ ಖರ್ಚು ಮಾಡಿ ಈಗಾಗಲೇ ನಾವು ಡ್ಯಾಮ್ ವರ್ಕ್ಸ್‌ನ್ನು ಮುಗಿಸಿದ್ದೇವೆ. ಆಮೇಲೆ ಕ್ರಸ್ಟ್‌ಗೇಟ್ ಹಾಕುವ ಹಂತದಲ್ಲಿದ್ದೇವೆ. ಕೆನಾಲ್ ವರ್ಕ್ ಸ್ಟಾರ್ಟ್ ಮಾಡುವ ಹಂತದಲ್ಲಿದ್ದೇವೆ. ಅದರಿಂದ ಇವರಿಗೆ ಬೇಕಾಗಿರುವುದೇ 7 ಕೋಟಿ ರೂಪಾಯಿ ಇದು ನಬಾರ್ಡ್ ಯೋಜನೆ ಇದು ಮುಗಿಯಲೇಬೇಕು.

ಅಲ್ಲಿ ಹಣದ ಕೊರತೆ ಇಲ್ಲ. ಈ ವರ್ಷದಲ್ಲಿ ನಬಾರ್ಡ್‌ನಲ್ಲಿರುವ ಎಲ್ಲಾ ಯೋಜನೆಗಳನ್ನು ಮುಗಿಸಬೇಕೆಂದು ಸರ್ಕಾರ ಕ್ರಮ ತೆಗೆದುಕೊಂಡಿದೆ. ಆರು ಯೋಜನೆಗಳಲ್ಲಿ ಇದು ಒಂದು ಯೋಜನೆ. ಖಂಡಿತಾ 1999ರ ಜೂನ್ ಅಥವಾ ಜುಲೈ At the most, by December the project will come into operation.

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ : 1997-98ನೇ ಸಾಲಿನಲ್ಲಿ ಇಟ್ಟ ಹಣ ಈಗಾಗಲೇ ಖರ್ಚಾಗಿದೆ. ಪುನಃ ಮತ್ತೆ ಹಣವನ್ನು ಒದಗಿಸುತ್ತಾರೋ ಇಲ್ಲವೋ ಅದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ.ಎನ್.ನಾಗೇಗೌಡ : ಹೋದ ಸಾರಿ 5 ಕೋಟಿ ರೂಪಾಯಿ ಗ್ರಾಂಟ್ ಇಟ್ಟಿದ್ದೆವು. By December, we have spent 4 crores, 50 lakhs. ಫೆಬ್ರವರಿ-ಮಾರ್ಚಿಗೆ 5 ಕೋಟಿ ರೂಪಾಯಿಯೂ ಖರ್ಚಾಗಿದೆ. ಪೆಂಡಿಂಗ್ ಬಿಲ್ ಇದ್ದರೆ ಈ ಅಕಾಡೆಮಿಕ್‌ಗೆ ಫೈನಾನ್ಸಿಯಲ್ ಇಯರ್ ತೆಗೆದುಕೊಂಡು ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡುತ್ತೇವೆ. ಇದು ನಬಾರ್ಡ್ ಯೋಜನೆ. ಇದನ್ನು ಕಂಪ್ಲೀಟ್ ಮಾಡುತ್ತೇವೆ.

ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕನಲ್ಲಿ ಸಾರಾಯಿ ಲೈಸನ್ಸ್.

145(1083) ಶ್ರೀ ಕುನ್ನೂರು ಮಂಜುನಾಥ ಚಿನ್ನಪ್ಪ (ಶಿಗ್ಗಾಂವಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕು ಯಾವ ಗುತ್ತಿಗೆದಾರರಿಗೆ ಸಾರಾಯಿ ಮಾರಾಟ ಮಾಡಲು ಅನುಮತಿ ನೀಡಲಾಗಿದೆ. ಅಧಿಕೃತ, ಅನಧಿಕೃತ ಅಂಗಡಿಗಳೆಷ್ಟು ?

ಆ) ಸದರಿ ಗುತ್ತಿಗೆದಾರರು ರಾಜ್ಯದ ಯಾವ ಯಾವ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಸಾರಾಯಿ ಗುತ್ತಿಗೆ ಪಡೆದಿದ್ದಾರೆ?

ಇ) ಸದರಿ ಗುತ್ತಿಗೆದಾರರು ಬ್ಯಾಡಗಿ ತಾಲ್ಲೂಕು ಆರಬಗೊಂಡ ಗ್ರಾಮದಲ್ಲಿ ಕಳಪೆ ಸಾರಾಯಿ ತಯಾರಿಸುವ ಘಟಕ ಇರುವುದು ನಿಜವೇ?

ಈ) ಸದರಿ ಗುತ್ತಿಗೆದಾರರು ಅನಧಿಕೃತ ಅಂಗಡಿಗಳನ್ನು ತೆರೆದಿರುವುದರಿಂದ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :

ಅ) ಶ್ರೀ ಆರ್.ರವಿಪ್ರಕಾಶ್‌ರವರು 1998-99ನೇ ಸಾಲಿಗೆ ಸವಣೂರು ತಾಲ್ಲೂಕಿನಲ್ಲಿ ಸಾರಾಯಿ ಗುತ್ತಿಗೆಯನ್ನು ಪಡೆದಿದ್ದು ಸಾರಾಯಿ ಮಾರಾಟ ಮಾಡಲು ಅನುಮತಿ ನೀಡಲಾಗಿರುತ್ತದೆ.

ಅಧಿಕೃತ ಅಂಗಡಿಗಳು : 31

ಅನಧಿಕೃತ ಅಂಗಡಿಗಳು : ಇರುವುದಿಲ್ಲ.